ವರ್ತಿಸಿದರು. ಅಮೆರಿಕಾದಲ್ಲಿ ಜನಾಂಗವಾದಿ ಬಿಳಿಯರು ಕರಿಯರ ಮೇಲೆ ನಡೆಸಿದ ಹಲ್ಲೆಗಳಲ್ಲೂ, ಭಾರತದ ಮತೀಯ ಗಲಭೆಗಳಲ್ಲೂ ವ್ಯಕ್ತಿಯ 'ದೋಷ'ಕ್ಕೆ ಸಮುದಾಯವನ್ನು ಹೊಣೆಯಾಗಿಸುವ ಮತ್ತು ಶಿಕ್ಷಿಸುವ ಇದೇ ಲಕ್ಷಣಗಳಿವೆ.

ಬಲಿಷ್ಠ ಜಾತಿ ಮತ್ತು ವರ್ಗಗಳು, ತಮ್ಮ ಸಾಂಪ್ರದಾಯಿಕ ಹಿಡಿತ ಉಳಿಸಿಕೊಳ್ಳುವುದಕ್ಕೂ, ಕೆಳಸ್ತರದ ಜಾತಿ ಮತ್ತು ವರ್ಗಗಳು ತಮ್ಮ ನ್ಯಾಯಬದ್ಧ ಅವಕಾಶಗಳಿಗಾಗಿ ಹೋರಾಡುವುದಕ್ಕೂ ಪ್ರಯತ್ನಿಸುತ್ತಿದ್ದವು. ಇದರಿಂದ 70ರ ದಶಕದ ಕರ್ನಾಟಕದ ಸಮಾಜವು ಕುದಿವ ಕಡಾಯಿಯಾಗಿತ್ತು. ಸಾಮಾಜಿಕ ಅಸಮಾನತೆ ಮತ್ತು ಆರ್ಥಿಕ ತಾರತಮ್ಯವಿರುವ ಸಮಾಜದಲ್ಲಿ ರಾಜಕೀಯ ಯುದ್ಧಗಳು ಕೆಲವೊಮ್ಮೆ ನೇರವಾಗಿ ನಡೆಯುವುದಿಲ್ಲ. ಅನುಕೂಲ ಕಳೆದುಕೊಳ್ಳುವ ಬಲಿಷ್ಠರಾಗಲಿ, ನ್ಯಾಯಬದ್ಧ ಹಕ್ಕುಗಳನ್ನು ಮುಂದಿಡುವ ದುರ್ಬಲರಾಗಲಿ, ಸಣ್ಣದೆಂದು ತೋರುವ ಸಂಗತಿಯನ್ನೂ ತಮ್ಮ ಆಕ್ರಮಣ ಅಥವಾ ಪ್ರತಿರೋಧಕ್ಕೆ ಆರಿಸಿಕೊಳ್ಳುತ್ತಾರೆ. ಸಂಸ್ಕೃತಿ, ಧರ್ಮ, ಭಾಷೆ, ಸಾಹಿತ್ಯ, ಲೈಂಗಿಕಶೀಲದಂತಹ ಭಾವನಾತ್ಮಕ ಸಂಗತಿಗಳನ್ನು ಹತ್ಯಾರದಂತೆ ಬಳಸಲಾಗುತ್ತದೆ. ನಿರ್ದಿಷ್ಟ ಘಟನೆಗೆ ಅವರು ತೋರುವ ಪ್ರತಿಕ್ರಿಯೆಗಳು, ಅವರ ಚಾರಿತ್ರಿಕ ತಲ್ಲಣಗಳ ಅಭಿವ್ಯಕ್ತಿ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಬಹುತೇಕ ಸಾಹಿತ್ಯಿಕ ವಿವಾದ ಮತ್ತು ಕೃತಿನಿಷೇಧಗಳ ಹಿಂದೆ ಸಾಮಾಜಿಕ ಗುಂಪು ಹಾಗೂ ಶಕ್ತಿ ರಾಜಕಾರಣದ ಒತ್ತಡಗಳಿರುವುದನ್ನು ಗಮನಿಸಬಹುದು.

ಸಮಾಜದಲ್ಲಿ ವಿಭಿನ್ನ ಸಮುದಾಯ ಮತ್ತು ವರ್ಗಗಳಿಗೆ ತಮ್ಮದೇ ದೃಷ್ಟಿಕೋನ ಮತ್ತು ಹಿತಾಸಕ್ತಿ ಇರುವಂತೆ, ಅವು ಕೂಡಿ ಪಯಣಿಸಲಾಗದ ವೈರುಧ್ಯಗಳೂ ಇರುತ್ತವೆ. ಆದರೆ, ನಿರ್ದಿಷ್ಟ ಚಾರಿತ್ರಿಕ ಸಂದರ್ಭದಲ್ಲಿ ಅವು ತಮ್ಮ ವೈರುಧ್ಯಗಳನ್ನು ಬದಿಗಿಟ್ಟು 'ಸಮಾನ ಶತ್ರು'ವಿನ ವಿರುದ್ಧ ಒಗ್ಗೂಡುತ್ತವೆ. ಬೂಸಾ ಪ್ರಕರಣದಲ್ಲಿ ಸಂಪ್ರದಾಯವಾದಿಗಳು, ಆಸ್ತಿಕರು, ಗಾಂಧಿವಾದಿಗಳು, ಊಳಿಗಮಾನ್ಯ ವ್ಯವಸ್ಥೆಯ ಮಾಲೀಕರು ಒಗ್ಗೂಡಿದರು ಮತ್ತು ಜಂಟೀ ಕಾರ್ಯಾಚರಣೆ ನಡೆಸಿದರು. ಅಲ್ಪಸಂಖ್ಯಾತ ಸಮುದಾಯಕ್ಕೆ ಅರಸು ಅವರು ಅಧಿಕಾರ ಹಿಡಿದಿರುವುದೂ ಅವರ ತಳಮಳದಲ್ಲಿ ಅಡಕವಾಗಿತ್ತು.



ಪಿ. ಲಂಕೇಶ್

ಪಿ. ಲಂಕೇಶ್ ಪ್ರಕಾರ, 70ರ ದಶಕದ ಹೊತ್ತಿಗೆ ಬ್ರಾಹ್ಮಣರಿಗೆ ಸ್ಪರ್ಧೆ ಉಂಟುಮಾಡುವಂತೆ ಶೂದ್ರ ಬರಹಗಾರರು ಉತ್ತಮ ಸಾಹಿತ್ಯ ರಚಿಸಿದ್ದರು. 'ಬ್ರಾಹ್ಮಣರ ಅಟಾಟೋಪ ಕೊಂಚ ತಗ್ಗಿ ಶೂದ್ರರ ವೈಭವ ನೆಲೆಗೊಳ್ಳುವಷ್ಟರಲ್ಲಿಯೇ, ದಲಿತರು ದಾರಿ ಮಾಡಿಕೊಂಡು ಮುಂದೆ ಬರುತ್ತಿರುವುದು ಬ್ರಾಹ್ಮಣರಲ್ಲಿ ಆಶಾ ಭಾವನೆಯನ್ನೂ, ಬ್ರಾಹ್ಮಣ ವಿರೋಧವುಳ್ಳ ವೈದಿಕ